JULY 27, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ದೇಸಿ ವಸ್ತ್ರ ಖಾದಿ ವಹಿವಾಟು, 8 ಸಾವಿರ ಕೋಟಿ ರೂಪಾಯಿ ತಲುಪಿದೆ; ಮನ್ ಕಿ ಬಾತ್ ನಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ, ಶ್ಲಾಘನೆ.**
- **ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯ, ಪರೀಕ್ಷಾ ಕ್ರಮಗಳ ಸುಧಾರಣೆಗೆ, ಕನ್ನಡಿಗ, ನಂದನ ನೀಲೇಕಣಿ ನೇತೃತ್ವದ, ಕಾರ್ಯಪಡೆ.**
- **ಧಾರವಾಡದ, ಟಿ.ಜಿ.ಉಪಾಧ್ಯೆ, ಕಾಮನ್‌ವೆಲ್ತ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ಗೆ, ಸಹಾಯಕ ನಿರ್ಣಾಯಕರಾಗಿ, ಆಯ್ಕೆ.**
- **ಇಂದು, ಕೇಂದ್ರೀಯ ಮೀಸಲು ಪೊಲೀಸ್ ಪಡೆ – C.R.P.F., ಸಂಸ್ಥಾಪನಾ ದಿನಾಚರಣೆ.**

<><><>

**ಈಗ ವಾರ್ತೆಗಳ ವಿವರ**

<><><>

**ಕಳೆದ 12 ವ ರ್ಷಗಳಲ್ಲಿ, ಖಾದಿ ಮಾರಾಟ 6 ಪಟ್ಟು ಹೆಚ್ಚಾಗಿದೆ. ಒಟ್ಟು ವಹಿವಾಟು 8 ಸಾವಿರ ಕೋಟಿ ರೂಪಾಯಿ ತಲುಪಿದೆ. ಮುಂಬರುವ ಹಬ್ಬಗಳ ಸಮಯದಲ್ಲಿ, ದೇಶ ಬಾಂಧವರು, ಖಾದಿ, ಕೈಮಗ್ಗ ಹಾಗೂ ಕರಕುಶಲ ವಸ್ತುಗಳನ್ನು ಖರೀದಿಸುವಂತೆ, ಪ್ರಧಾನಮಂತ್ರಿ ನರೇಂದ್ರ ಮೋದಿ, ವಿನಂತಿಸಿದ್ದಾರೆ. ಆಕಾಶವಾಣಿಯ ಬಹುಶ್ರುತ, ಮನ್ ಕಿ ಬಾತ್ ಮಾಸಿಕ ಕಾರ್ಯಕ್ರಮದ, 136ನೇ ಆವೃತ್ತಿಯಲ್ಲಿ, ಅವರು ದೇಶ–ವಿದೇಶಗಳ ಭಾರತೀಯರೊಂದಿಗೆ, ತಮ್ಮ ಮನದ ಮಾತು ಹಂಚಿಕೊಂಡರು.**

<><><>

**‘ವೋಕಲ್ ಫಾರ್ ಲೋಕಲ್’ ಧ್ಯೇಯದೊಂದಿಗೆ, ಧಾರವಾಡದ ಯುವ ನವೋದ್ಯಮಿ, ಅವನಿ ಚೇತನ ದೇಶಪಾಂಡೆ, ವಸ್ತ್ರಕುಟಿ ಕೈಮಗ್ಗ ಹಾಗೂ ಖಾದಿ ವಸ್ತ್ರ ಭಂಡಾರ ಸ್ಥಾಪಿಸಿ, ‘ಉಡುಗೆ’ ಎಂಬ ಸ್ಥಳೀಯ ಬ್ರ್ಯಾಂಡ್ ಮೂಲಕ, ಕೈ ಮಗ್ಗ – ಖಾದಿ ಉತ್ಪನ್ನಗಳನ್ನು, ಪಾಂಡಿಚೇರಿಯಲ್ಲೂ ಪ್ರಚುರ ಪಡಿಸುತ್ತಿದ್ದಾರೆ.**

<><><>

ಈ ಕುರಿತು ಒಂದು ವರದಿ..

<><><>

*ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, ಮುದ್ರಾ ಯೋಜನೆಯಿಂದ ಪ್ರೇರಿತರಾದ, ಯುವ ನವೋದ್ಯಮಿ ಅವನಿ ಹಾಗೂ ಚೇತನ ದೇಶಪಾಂಡೆ ದಂಪತಿ, ಕಳೆದ 2018ರ ಆಗಸ್ಟ್ 15 ರಂದು, ಧಾರವಾಡದಲ್ಲಿ ದೇಸಿ ಖಾದಿಯ, ಕೈ ಮಗ್ಗ ಉತ್ಪನ್ನಗಳ ಮಳಿಗೆ ಆರಂಭಿಸಿ, ಸ್ವಾವಲಂಬಿ ಉದ್ಯಮಿಗಳಾದರು. ತಮ್ಮ ವಸ್ತ್ರಕುಟಿಯಲ್ಲಿ, ನಾಲ್ವರಿಗೆ, ಖಾದಿ ಹಾಗೂ ಕೈಮಗ್ಗ ನೇಕಾರರ 25ಕ್ಕೂ ಹೆಚ್ಚು ಕುಟುಂಬಗಳಿಗೆ, ಉದ್ಯೋಗ ಹಾಗೂ ಯುವಜನರ ಆಶೋತ್ತರಗಳಿಗೆ ಸ್ಪಂದಿಸುವಂತೆ, ನವೀನ ವಿನ್ಯಾಸದ ವಸ್ತ್ರಗಳನ್ನು ಸಿದ್ಧಪಡಿಸಿ, ದೇಶ-ವಿದೇಶಗಳಿಗೂ ಈಗ ರವಾನಿಸುತ್ತಿದ್ದಾರೆ. ಪ್ರಧಾನಮಂತ್ರಿಯವರ ಮನದ ಮಾತು, ಪಾಂಡಿಚೇರಿಯಲ್ಲಿ ಆಲಿಸಿರುವ, ಅವನಿ ಚೇತನ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ವ್ಯಕ್ತ ಪಡಿಸಿದ್ದಾರೆ.*

<><><>

ವಿವೇಕ (43) + ಅವನಿ ಚೇತನ ಧ್ವನಿ (60) ಸೆಕೆಂದುಗಳು

<><><>

ರಾಷ್ಟ್ರೀಯ ಪರೀಕ್ಷಾ ಸಂಸ್ಥೆ – ಎನ್.ಟಿ.ಎ. ನಡೆಸುವ ಪರೀಕ್ಷೆಗಳಲ್ಲಿ, ಕೈಗೊಳ್ಳಬೇಕಾದ ಸುಧಾರಣಾ ಕ್ರಮಗಳ ಕುರಿತು, ಶಿಫಾರಸು ಮಾಡಲು, ಆಧಾರ ಶಿಲ್ಪಿ ಎಂದೇ ಹೆಸರಾದ, ಕನ್ನಡಿಗ, ಇನ್ಫೋಸಿಸ್ ಸಹ ಸಂಸ್ಥಾಪಕ, ನಂದನ ನೀಲೇಕಣಿ ನೇತೃತ್ವದ, ಉನ್ನತ ಮಟ್ಟದ ಕಾರ್ಯಪಡೆ ರಚಿಸಿ, ಪ್ರಧಾನಮಂತ್ರಿ ನರೇಂದ್ರ ಮೋದಿ, ಸಾಮಾಜಿಕ ಮಾಧ್ಯಮ, ಫೇಸ್‌ಬುಕ್‌ನಲ್ಲಿ ಪ್ರಕಟಿಸಿದ್ದಾರೆ.

<><><>

ಈ ಮಧ್ಯೆ, ಕೇಂದ್ರದ ನೂತನ ಶಿಕ್ಷಣ ಖಾತೆ ಸಚಿವರಾಗಿ, ಹೊಸ ದಿಲ್ಲಿಯಲ್ಲಿ ಅಧಿಕಾರ ವಹಿಸಿಕೊಂಡ, ಪ್ರಲ್ಹಾದ ಜೋಶಿ, ದೇಶದ ವಿದ್ಯಾರ್ಥಿ-ಯುವ ಜನರ, ಉಜ್ವಲ ಭವಿಷ್ಯ ರೂಪಿಸುವ, ಶೈಕ್ಷಣಿಕ ಕ್ಷೇತ್ರವನ್ನು ಇನ್ನಷ್ಟು ಬಲಪಡಿಸಲು, ತಾವು ಪ್ರಾಮಾಣಿಕವಾಗಿ ಪ್ರಯತ್ನಿಸುವುದಾಗಿ, ತಿಳಿಸಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸಾರಥ್ಯದಲ್ಲಿ, ಕಳೆದ 12 ವರ್ಷಗಳಿಂದಲೂ, ಭಾರತದ ಶಿಕ್ಷಣ ವ್ಯವಸ್ಥೆ, ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನ ಸೇರಿದಂತೆ, ಅಭೂತಪೂರ್ವ ಸುಧಾರಣೆ ಕಂಡಿದೆ. ನೀಟ್ ಪರೀಕ್ಷೆ ವಿವಾದದ, ಪ್ರಸ್ತುತ ಸನ್ನಿವೇಶದಲ್ಲಿ, ಪ್ರಧಾನಮಂತ್ರಿಯವರು, ನಂಬಿಕೆಯಿಟ್ಟು ಶಿಕ್ಷಣ ಸಚಿವಾಲಯದ ಹೆಚ್ಚುವರಿ ಹೊಣೆಗಾರಿಕೆ ವಹಿಸಿದ್ದಾರೆ. ಅತ್ಯಂತ ಜವಾಬ್ದಾರಿಯಿಂದ, ತಾವು ನಿಭಾಯಿಸುವುದಾಗಿ, ಹೇಳಿದರು.

<><><>

ಕೇಂದ್ರದಲ್ಲಿ ಬಾಕಿ ಹಾಗೂ ವಿಳಂಬವಾಗಿರುವ, ರಾಜ್ಯದ ಯೋಜನೆಗಳು ಸೇರಿದಂತೆ, ಒಟ್ಟಾರೆ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಹೊಸ ದಿಲ್ಲಿಯ ಕರ್ನಾಟಕ ಭವನದಲ್ಲಿ, ಇಂದು ಸಂಜೆ 6.30ಕ್ಕೆ ವಿಶೇಷ ಸಭೆ ನಡೆಸಲಿದ್ದಾರೆ. ರಾಜ್ಯದ ಎಲ್ಲ ಸಂಸದರು, ರಾಜ್ಯಸಭೆ ಸದಸ್ಯರು ಪಾಲ್ಗೊಳ್ಳಲಿದ್ದು, ಬಳಿಕ ಪ್ರಧಾನಮಂತ್ರಿಯವರ ಬಳಿ, ಸರ್ವಪಕ್ಷ ನಿಯೋಗ ಕೊಂಡೊಯ್ಯುವ ಬಗ್ಗೆ, ಚರ್ಚೆ ನಡೆಯಲಿದೆ ಎಂದು, ವರದಿಗಳು ತಿಳಿಸಿವೆ.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

**(37 ಸೆಕೆಂದುಗಳು)**

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಧಾರವಾಡದ, ಟಿ.ಜಿ.ಉಪಾಧ್ಯೆ ಅವರು, ಇಂದನಿಂದ ಹೊಸ ದಿಲ್ಲಿಯ, ತ್ಯಾಗರಾಜ ಕ್ರೀಡಾಂಗಣದಲ್ಲಿ ನಡೆಯಲಿರುವ, ಕಾಮನ್‌ವೆಲ್ತ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ, ಸಹಾಯಕ ರೆಫರಿ ಆಗಿ ಕಾರ್ಯನಿರ್ವಹಿಸಲಿದ್ದಾರೆ. ಹಲವಾರು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ, ಟೇಬಲ್ ಟೆನಿಸ್ ಟೂರ್ನಿಗಳಲ್ಲಿ ನಿರ್ಣಾಯಕರಾಗಿ ಕಾರ್ಯನಿರ್ವಹಿಸಿರುವ, ಟಿ.ಜಿ. ಉಪಾಧ್ಯೆ ಅವರನ್ನು,ಕರ್ನಾಟಕ ಟೇಬಲ್ ಟೆನಿಸ್ ಸಂಸ್ಥೆ, ನಾಮನಿರ್ದೇಶನ ಮಾಡಿದೆ. ಪ್ರದೇಶ ಸಮಾಚಾರಕ್ಕಾಗಿ, ಟಿ.ಜಿ. ಉಪಾಧ್ಯೆ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಟಿ.ಜಿ. ಉಪಾಧ್ಯೆ ಧ್ವನಿ **(54)** ಸೆಕೆಂದುಗಳು

<><><>

ಇಂದು, ಕೇಂದ್ರೀಯ ಮೀಸಲು ಪೊಲೀಸ್ ಪಡೆ – **C.R.P.F.** ಸಂಸ್ಥಾಪನಾ ದಿನಾಚರಣೆ. ಅಂದಿನ ಕೇಂದ್ರ ಗೃಹ ಖಾತೆ ಸಚಿವ, ಸರ್ದಾರ ವಲ್ಲಭಭಾಯಿ ಪಟೇಲ ಅವರ, ದೂರದೃಷ್ಟಿಯ ಫಲವಾಗಿ, ಭಾರತ ಒಕ್ಕೂಟದ, ಪ್ರಮುಖ ಕೇಂದ್ರ ಪೊಲೀಸ್ ಪಡೆಯಾಗಿ, ಆಂತರಿಕ ಭದ್ರತೆ ಕಾಪಾಡುವ, ನಿರ್ಣಾಯಕ ಹೊಣೆ ಹೊತ್ತ ಪಡೆ ಸಿದ್ಧವಾಯಿತು. ಜುಲೈ **27, 1939** – ದೇಶಿ ಸಂಸ್ಥಾನಗಳಲ್ಲಿ, ಹೆಚ್ಚುತ್ತಿದ್ದ ರಾಜಕೀಯ ಪ್ರಕ್ಷುಬ್ಧತೆ ಮತ್ತು ಅಶಾಂತಿಗೆ ಪ್ರತಿಕ್ರಿಯೆಯಾಗಿ, ಕ್ರೌನ್ ರೆಪ್ರೆಸೆಂಟೇಟಿವ್ಸ್ ಪೊಲೀಸ್ ಹೆಸರಿನಲ್ಲಿ ಆರಂಭಗೊಂಡ ಈ ಪಡೆ, ಕಾಲಕ್ರಮೇಣ, ದೇಶದ ಅತ್ಯಂತ ಹಳೆಯ ಮತ್ತು ಪ್ರತಿಷ್ಠಿತ ಕೇಂದ್ರ ಅರೆಸೇನಾ ಪಡೆಗಳಲ್ಲಿ ಒಂದಾಗಿ, ರೂಪುಗೊಂಡಿದೆ. **1936** ರಲ್ಲಿ ನಡೆದ, ಅಖಿಲ ಭಾರತ ಕಾಂಗ್ರೆಸ್ ಸಮಿತಿಯ, 'ಮದ್ರಾಸ್ ನಿರ್ಣಯ' ಈ ಪಡೆಯ ರಚನೆಗೆ, ಪ್ರಭಾವ ಬೀರಿತ್ತು. ಸ್ವಾತಂತ್ರ್ಯದ ಬಳಿಕ, **1949** ಡಿಸೆಂಬರ್ **28** ರಂದು, ಸಂಸತ್ತಿನ ಕಾಯ್ದೆಯ ಮೂಲಕ, 'ಸೆಂಟ್ರಲ್ ರಿಸರ್ವ್ ಪೊಲೀಸ್ ಫೋರ್ಸ್' ಎಂದು, ಮರು ನಾಮಕರಣಗೊಂಡಿತು.

<><><>

ನಿಧನ ವಾರ್ತೆ

<><><>

ಶಿವಮೊಗ್ಗ ಕ್ಷೇತ್ರದ ಮಾಜಿ ಶಾಸಕ, ಕಾಂಗ್ರೆಸ್ ಹಿರಿಯ ಮುಖಂಡ, ಎಚ್.ಎಂ.ಚಂದ್ರಶೇಖರಪ್ಪ ನಿಧನರಾಗಿದ್ದಾರೆ. ಅವರಿಗೆ **78** ವರ್ಷ ವಯಸ್ಸಾಗಿತ್ತು. ಶಾಸಕರಾಗಿ ಹಾಗೂ ರಾಜ್ಯ ಮಾಜಿ ಶಾಸಕರ ವೇದಿಕೆಯ ಅಧ್ಯಕ್ಷರಾಗಿ, ಅವರು ಸಾರ್ವಜನಿಕ ಜೀವನದಲ್ಲಿ, ಸುದೀರ್ಘ ಸೇವೆ ಸಲ್ಲಿಸಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ. ವೈ ವಿಜಯೇಂದ್ರ ಸೇರಿದಂತೆ, ಅನೇಕ ಗಣ್ಯರು ಕಂಬನಿ ಮಿಡಿದಿದ್ದಾರೆ.

<><><>

ಪಶು ವೈದ್ಯಾಧಿಕಾರಿಗಳ 400 ಹುದ್ದೆಗಳ ನೇಮಕಾತಿಯಲ್ಲಿ, ಅಕ್ರಮದ ಆರೋಪಗಳ ಹಿನ್ನೆಲೆ, ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲಾಗಿದೆ. ಅಂತಿಮ ಆಯ್ಕೆ ಪಟ್ಟಿಯನ್ನು, ತಾತ್ಕಾಲಿಕವಾಗಿ ತಡೆಹಿಡಿಯಲಾಗಿದ್ದು, ಆರೋಪಗಳ ವಿಚಾರಣೆ ನಡೆಸಲು, ನಾಲ್ವರು ಸದಸ್ಯರನ್ನು ಒಳಗೊಂಡ ಉಪ ಸಮಿತಿ ರಚಿಸಿ, ಕರ್ನಾಟಕ ಲೋಕಸೇವಾ ಆಯೋಗ – ಕೆ.ಪಿ.ಎಸ್.ಸಿ. ಕಾರ್ಯದರ್ಶಿ ಕೆ. ಜ್ಯೋತಿ ಆದೇಶಿಸಿದ್ದಾರೆ.

<><><>

ವಿಜಯಪುರದ, ಆದಿಲ್‌ಶಾಹಿ ಕಾಲದ, ಐತಿಹಾಸಿಕ ಮಮದಾಪುರ ಕೆರೆ, ಕರ್ನಾಟಕದ ಮೂರನೇ ಅತಿ ದೊಡ್ಡ ಕೆರೆಯಾಗಿದ್ದು, ಕೆರೆಗೆ ಮತ್ತೆ ಜೀವಕಳೆ ಬಂದಿದೆ ಎಂದು, ಕೈಗಾರಿಕೆಗಳ ಖಾತೆ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ. ಮಮದಾಪುರ ಕೆರೆ, ಸುತ್ತಮುತ್ತಲಿನ 32 ಗ್ರಾಮಗಳಿಗೆ, ಕುಡಿಯುವ ನೀರು ಒದಗಿಸುವುದರ ಜೊತೆಗೆ, ವಿಜಯಪುರ ಜಿಲ್ಲೆಯ ಬಹುಭಾಗದಲ್ಲಿ, ಅಂತರ್ಜಲ ಮಟ್ಟ ಸುಧಾರಿಸಲು, ಮಹತ್ವದ ಪಾತ್ರ ವಹಿಸುತ್ತಿದೆ. ವಿಜಯಪುರದ ಜನತೆಯ ಜೀವನಾಡಿಯಾಗಿದೆ, ಎಂದಿದ್ದಾರೆ.

<><><>

ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಖಾತೆ ಸಚಿವ, ಯು.ಟಿ.ಖಾದರ್ ಅವರಿಗೆ, ಅಮೆರಿಕದ, ಮಲ್ಟಿ ಎಥ್ನಿಕ್ ಕಮಿಷನ್, ಪ್ರತಿಷ್ಠಿತ ಗ್ಲೋಬಲ್ ಸಿವಿಕ್ಸ್ ಲೀಡರಶಿಪ್ ಅವಾರ್ಡ್‌ನ್ನು, ಷಿಕ್ಯಾಗೋದಲ್ಲಿ ನೀಡಿ, ಗೌರವಿಸಿತು. ಸಾರ್ವಜನಿಕ ಸೇವೆ, ಆರೋಗ್ಯ ಹಾಗೂ ಸಮಾಜ ಕಲ್ಯಾಣ ಕ್ಷೇತ್ರದಲ್ಲಿ, ಖಾದರ್ ಅವರು ಸಲ್ಲಿಸಿದ, ಅನುಪಮ ಸೇವೆಗಾಗಿ ಈ ಪುರಸ್ಕಾರ ನೀಡಿ, ಗೌರವಿಸಿದ್ದಾಗಿ ಸಂಸ್ಥೆಯ ಪ್ರಕಟಣೆ ತಿಳಿಸಿದೆ.

<><><>

ಕೋಲಾರದಲ್ಲಿ, ಬಾಬಾಸಾಹೇಬ ಅಂಬೇಡ್ಕರ ಅವರ ಬದುಕು ಪರಿಚಯಿಸುವ, ವಸ್ತುಸಂಗ್ರಹಾಲಯ, ಗ್ರಂಥಾಲಯ ಹಾಗೂ ಸಾವಿರ ಆಸನಗಳ ಸಭಾಭವನ ನಿರ್ಮಾಣಕ್ಕೆ, 1 ಕೋಟಿ ರೂಪಾಯಿ ಅನುದಾನ ನೀಡುವುದಾಗಿ, ವಿಧಾನ ಪರಿ ತ್ ಶಾಸಕ, ಎಂ.ಎಲ್. ಅನಿಲಕುಮಾರ, ತಿಳಿಸಿದ್ದಾರೆ.

<><><>

ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲೂಕು, ಕೈವಾರದ ಶ್ರೀ ಯೋಗಿ ನಾರೇಯಣ ಮಠದಲ್ಲಿ, ಗುರು ಪೂರ್ಣಿಮೆ ಅಂಗವಾಗಿ, ನಾಳೆಯಿಂದ ಮೂರು ದಿನ, ಸಂಗೀತೋತ್ಸವ ನಡೆಯಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ದೇಸಿ ವಸ್ತ್ರ ಖಾದಿ ವಹಿವಾಟು, 8 ಸಾವಿರ ಕೋಟಿ ರೂಪಾಯಿ ತಲುಪಿದೆ: ಮನ್ ಕಿ ಬಾತ್ ನಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ, ಶ್ಲಾಘನೆ.
- ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯ, ಪರೀಕ್ಷಾ ಕ್ರಮಗಳ ಸುಧಾರಣೆಗೆ, ಕನ್ನಡಿಗ, ನಂದನ ನೀಲೇಕಣಿ ನೇತೃತ್ವದ, ಕಾರ್ಯಪಡೆ.

- ಧಾರವಾಡದ, ಟಿ.ಜಿ.ಉಪಾಧ್ಯೆ, ಕಾಮನ್‌ವೆಲ್ತ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ಗೆ, ಸಹಾಯಕ ನಿರ್ಣಾಯಕರಾಗಿ, ಆಯ್ಕೆ.
- ಇಂದು, ಕೇಂದ್ರೀಯ ಮೀಸಲು ಪೊಲೀಸ್ ಪಡೆ – C.R.P.F., ಸಂಸ್ಥಾಪನಾ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>